<u>ಸಾಕ್ಷಿಗೆ ದಿನಾಂಕ *14-03-2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಎದರುದಾರರ ಪರ ಶ್ರೀ ಎಮ್ ಐ ಕೆ ವಕೀಲರಿಂದಃ</u>

ದೂರುದಾರರು ನನ್ನ ತಮ್ಮ. ಅಪಘಾತವು ದಿನಾಂಕ *23-09-2022* ರಂದು ಆಗಿರುತ್ತದೆ. ಯಾವ ದಿನ ಆಗಿದೆ ಎಂದು ನೆನಪಿರುವುದಿಲ್ಲ. ನನಗೆ ಟಿ ವಿ ಎಸ್ ಎಕ್ಸಲ್ ಗಾಡಿ ಇದ್ದು, ಅದು ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ವಾಹನಕ್ಕೆ ಆರ ಸಿ ಇದ್ದು ಅದನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿ ವಾಹನಕ್ಕೆ ವಿಮೆ ಇರಲಿಲ್ಲ. ನನಗೆ ವಾಹನ ಚಲಾಯಿಸಲು ಡಿ ಎಲ್ ಇರಲಿಲ್ಲ. ಡಿ ಎಲ್ ಇರದೇ ವಾಹನ ಚಲಾಯಿಸಲು ಬರುವುದಿಲ್ಲ ಎಂದರೆ ಸರಿ. ನನಗೆ ವಾಹನ ಚಲಾಯಿಸಲು ಬರದೇ ಇರುವುದರಿಂದ ಡಿ ಎಲ್ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ವಾಹನದ ಹಿಂದಿನ ಚಕ್ರಕ್ಕೆ ಬಸ್ಸ ಡಿಕ್ಕಿ ಪಡಿಸಿರುತ್ತದೆ. ಮುದ್ದೆ ಬಿಹಾಳಕ್ಕೆ ಹೋಗುವ ರಸ್ತೆಯು ತುಂಬಾ ಅಗಲವಾಗಿರುತ್ತದೆ ಎಂದರೆ ಸರಿ. ನಾನು ನನ್ನ ವಾಹನವನ್ನು ಬಸ್ಸಗೆ ಡಿಕ್ಕಿ ಪಡಿಸಿದ್ದರಿಂದ ಬಸ್ಸಿನ ಎಡಗಡೆ ಭಾಗದಲ್ಲಿ ನನ್ನ ವಾಹನದ ಹ್ಯಾಂಡಲ್ ನಿಂದ ಗೀರ ಬಿದ್ದಿರುತ್ತದೆ ಎಂದರೆ ಸರಿಯಲ್ಲ. ನಾನು ರಸ್ತೆಯ ಎಡಭಾಗದಲ್ಲಿ ಬಿದ್ದಿರುತ್ತೇನೆ ಎಂದರೆ ಸರಿ. ಸದರಿ ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ವಾಹನವನ್ನು ಬಿಡಿಸಿಕೊಂಡಿರುತ್ತೇನೆ. ಈ ವರೆಗೂ ನನ್ನ ವಾಹನಕ್ಕೆ ವಿಮೆ ಮಾಡಿಸಿರುವುದಿಲ್ಲ. ಈಗ ನನ್ನ ವಾಹನವನ್ನು ಮನೆಯಲ್ಲಿ ಇಟ್ಟಿರುತ್ತೇನೆ. ಎದರುದಾರರು ನನ್ನ ಮೇಲೆ ನನ್ನ ತಪ್ಪಿನಿಂದ ಅಪಘಾತ ಆಗಿದೆ ಎಂದು ದೂರು ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಮುದ್ದೇಬಿಹಾಳದ ಸರಕಾರಿ ಆಸ್ಪತ್ರೆಯಲ್ಲಿ ತೋರಿಸಿರುತ್ತೇನೆ. ನಾನು ಮುದ್ದೆಬಿಹಾಳದ ಸರಕಾರಿ ಆಸ್ಪತ್ರೆಯಲ್ಲಿ ತೋರಿಸಿರುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಸರಕಾರಿ ಆಸ್ಪತ್ರೆಯಿಂದ ಬಾಗಲಕೋಟ ಆಸ್ಪತ್ರೆಗೆ ಹೋಗಲಿಕ್ಕೆ ರೆಫರನ್ಸ ಲೇಟರನ್ನು ತೆಗೆದುಕೊಂಡ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಹಾಜರು ಪಡಿಸಿರುವ ಬಿಲ್ಲುಗಳು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಬಿಲ್ಲುಗಳಿಗೆ ಜಿ ಎಸ್ ಟಿ ಮತ್ತು ಕೆ ಎಸ್ ಟಿ ಇರುವುದಿಲ್ಲ ಎಂದರೆ ಸಾಕ್ಷಿದಾರರು ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಾನು ಹಾಜರು ಪಡಿಸಿರುವ ಬಿಲ್ಲುಗಳಿಗೂ ಮತ್ತು ಸಲಹಾ ಚೀಟಿಗಳಿಗೆ ಸಂಬಂದ ಇರುವುದಿಲ್ಲ ಎಂದರೆ ಸಾಕ್ಷಿದಾರರು ಯಾವುದೇ ರೀತಿಯಿಂದ ಉತ್ತರವನ್ನು ನೀಡಿರುವುದಿಲ್ಲ. ಎಕ್ಸರೆಗಳನ್ನು ಯಾವ ದಿನಾಂಕದಂದು ತೆಗೆದಿರುತ್ತಾರೆ ಎಂದು ಹೇಳಲು

ಬರುವುದಿಲ್ಲ. ನಾನು ಖೊಟ್ಟಿ ಬಿಲ್ಲುಗಳನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಲ್ಯಾಬ ವರದಿಗಳಿಗೆ ಸೀಲ್ ಮತ್ತು ಸಹಿ ಇರುವುದಿಲ್ಲ ಎಂದರೆ ಸಾಕ್ಷಿದಾರರು ಯಾವುದೇ ಉತ್ತರ ನೀಡಿರುವುದಿಲ್ಲ. ನಾನು ಆಸ್ಪತ್ರೆಯ ಖರ್ಚಿಗೊಸ್ಕರ *1* ಲಕ್ಷ ರೂ. ಗಳನ್ನು ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರಕಾರಿ ಆಸ್ಪತ್ರೆಯಲ್ಲಿ ನನಗೆ ಗಾಯದ ಪ್ರಮಾಣ ಪತ್ರವನ್ನು ನೀಡದೇ ಇರುವುದರಿಂದ ಬಾಗಲಕೋಟೆ ಆಸ್ಪತ್ರೆಯಲ್ಲಿ ತೋರಿಸಿರುವ ದಾಖಲೆಗಳು ನನಗೆ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತದ ಕುರಿತು ಎದುರುದಾರರು ತನಿಖೆ ಮಾಡಿಸಿದ್ದು ಅದರಲ್ಲೂ ಕೂಡ ನನ್ನ ತಪ್ಪು ಇರುತ್ತದೆ ಎಂದು ವರದಿ ಬಂದಿರುತ್ತದೆ ಎಂದರೆ ಸರಿಯಲ್ಲ. ನನಗೆ *68* ವರ್ಷ ವಯಸ್ಸು. ಈ ಕುರಿತು ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ನಾನು ಗಳೆಹೊಡೆಯಲು ಹೋಗುತ್ತೇನೆ. ದಿನಕ್ಕೆ *500* ರೂ. ಪಗಾರ ಕೊಡುತ್ತಾರೆ. ನಾನು ಯಾವುದೇ ಕೆಲಸಕ್ಕೆ ಹೋಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಆಗಿದ್ದರಿಂದ ನನಗೆ ಪರಿಹಾರ ಬರುವುದಿಲ್ಲ ಎಂದರೆ ಸಾಕ್ಷಿದಾರರು ವಾಹನವನ್ನು ಹೊಡೆಯಬಾರದಾಗಿತ್ತು ಹೊಡೆದಿರುತ್ತೇನೆ ಎಂದು ಹೇಳುತ್ತಾರೆ. ಪರಿಹಾರದ ಹಣವನ್ನು ಪಡೆಯಲು ಭಾದ್ಯಸ್ತನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

HANAMANTARAO R KULKARNI

Digitally signed by HANAMANTARAO R KULKARNI
Date: 2025.03.15 12:39:58 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.